**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 543/2019**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ದ-

ಆರೋಪಿತರು ಃ
1. ಪುನೀತ್ ಕುಮಾರ್
2. ಸುರೇಖಾ
3. ರಾಜಾನಾಯ್ಕ

-ಃ ದೋಷಾರೋಪಣೆಃ-

ಶ್ರೀ ದೀಪು ಎಂ.ಟಿ., ಬಿ.ಎ., ಎಲ್. ಎಲ್.ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಪುನೀತ್ ಕುಮಾರ್ ಬಿನ್ ರಾಜಾನಾಯ್ಕ, 30 ವರ್ಷ,
2. ಸುರೇಖಾ ಕೋಂ ರಾಜಾನಾಯ್ಕ, 56 ವರ್ಷ,
3. ರಾಜಾನಾಯ್ಕ ಬಿನಲಚ್ಚಾನಾಯ್ಕೆ, 60 ವರ್ಷ,

ಎಲ್ಲರ ವಾಸಃ ಮನೆ ನಂ.18, 5 ನೇ ಕ್ರಾಸ್, ಗಣೇಶ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕ 08.12.2016 ರಂದು 1 ನೇ ಆರೋಪಿಯಾದ ನೀವು ಚಾ.ಸಾ.1 ಶ್ರೀಮತಿ ಎಸ್.ಯಶಸ್ವಿನಿ ರವರನ್ನು ಹಿಂದೂ ಸಂಪ್ರದಾಯದಂತೆ ಗುರುಹಿರಿಯರ ಸಮಕ್ಷಮದಲ್ಲಿ ಬೆಂಗಳೂರು ನಗರದಲ್ಲಿರುವ ಶ್ರೀ ಮೀನಾಕ್ಷಿ ಕಲ್ಯಾಣ ಮಂಟಪದಲ್ಲಿ ಸಂಪ್ರಾದಾಯಿಕವಾಗಿ ವಿವಾಹವಾಗಿದ್ದು ಆ ಸಮಯದಲ್ಲಿ ವರದಕ್ಷಿಣೆಯಾಗಿ 1 ನೇ ಆರೋಪಿಯಾದ ನಿಮಗೆ 48 ಗ್ರಾಂ ಚಿನನ್, ಕೊರಳಿನ ಸರ, ಹಾಗೂ 32 ಗ್ರಾಂ ಬ್ರೇಸ್ಲೇಟ್, ಬಂಗಾರದ ಉಂಗುರ ಹಾಗೂ ಒಂದು ಕೆ.ಜಿ. ಬೆಳ್ಳಿಯ ಸಾಮಾನುಗಳನ್ನು ನೀಡಿದ್ದಲ್ಲದೆ, ಚಾ.ಸಾ.1 ರವರಿಗೆ 70 ಗ್ರಾಂ ಚಿನ್ನದ ನಕ್ಲೇಸ್, 7 ತೊಲದ 4 ಚಿನ್ನದ ಬಳೆ, 60 ಗ್ರಾಂ ಚಿನ್ನದ ಸರಗಳನ್ನು ಪಡೆದುಕೊಂಡಿರುತ್ತೀರಿ ಮತ್ತು ಮದುವೆಯಾದ ಸ್ವಲ್ಪ ದಿನಗಳ

ನಂತರ ಅಂದರೆ ದಿನಾಂಕ 12-12-2016 ರಂದು ಚಾ.ಸಾ.7 ಎಸ್.ಪಿ.ನಾಯರವರ ಮನೆಯಲ್ಲಿದ್ದ ದೇವತಾ ಕಾರ್ಯಕ್ಕೆ ಬಂದಿದ್ದಾಗ, ಆರೋಪಿತರೆಲ್ಲರೂ ಚಾ.ಸಾ.1 ರವರಿಗೆ ತವರು ಮನೆಯಿಂದ ಇನ್ನು ಹೆಚ್ಚಿಗೆ 150 ಗ್ರಾಂ ಚಿನ್ನವನ್ನು, ಕಾರು ಹಾಗೂ ವರದಕ್ಷಿಣೆ ಹಣ ತರುವಂತೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿರುತ್ತೀರಿ ಆದ್ದರಿಂದ ನೀವು ಭಾ.ದಂ.ಸಂ.ಕಲಂ.498(ಎ) ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ ಹಾಗೂ ಸಂದರ್ಭಗಳಂದು 1 ನೇ ಆರೋಪಿಯು ಕರ್ತವ್ಯಕ್ಕೆ ಹೋಗಿದ್ದಾಗ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ-1 ರವರೊಂದಿಗೆ ಅವರು ಅಪರಾಧ ಮಾಡುವಂತೆ ಪ್ರಚೋಧಿಸುವ ಸಲುವಾಗಿ ಅವರೊಂದಿಗೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗವುಂಟು ಮಾಡಿರುತ್ತೀರಿ ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಚಾಸಾ-1 ರವರೊಂದಿಗೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, ಅವರಿಗೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿ ಅಪರಾಧಿಕಾ ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಿ ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ದಿನಾಂಕ 12-12-2016 ರಂದು ಚಾ.ಸಾ.7 ಎಸ್.ಪಿ.ನಾಯರವರ ಮನೆಯಲ್ಲಿದ್ದ ದೇವತಾ ಕಾರ್ಯಕ್ಕೆ ಬಂದಿದ್ದಾಗ, ಆರೋಪಿತರೆಲ್ಲರೂ ಚಾ.ಸಾ.1 ರವರಿಗೆ ತವರು ಮನೆಯಿಂದ ಇನ್ನು ಹೆಚ್ಚಿಗೆ 150 ಗ್ರಾಂ ಚಿನ್ನವನ್ನು, ಕಾರು ಹಾಗೂ ವರದಕ್ಷಿಣೆ ಹಣ ತರುವಂತೆ ಮಾನಸಿಕವಾಗಿ ಮತ್ತು

ದೈಹಿಕವಾಗಿ ಹಿಂಸೆ ನೀಡಿರುತ್ತೀರಿ ಆದ್ದರಿದ  ನೀವು ಕಲಂ 3 ಮತ್ತು 4 ವರದಕ್ಷಿಣೆ  ನಿಶೇಧ ಕಾಯ್ದೆಯಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 20.06.2019

ಸಹಿ/-

**(ದೀಪು ಎಂ.ಟಿ.)**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಡೂರು.

**<u>3 ನೇ ಹೆಚ್ಚುವರಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.</u>**
**ಸಿ.ಸಿ.543/2019**

ಆರೋಪಿ ಸಂಖ್ಯೆ ಃ1
ಆಪಾದಿತರ ಹೆಸರು ಃ ಪುನೀತ್ ಕುಮಾರ್
ತಂದೆಯ ಹೆಸರು ಃ ರಾಜಾನಾಯ್ಕ
ವಯಸ್ಸು ಃ 30 ವರ್ಷ
ಉದ್ಯೋಗ ಃ ಜೆ.ಈ.ಗೌರ್ನಮೆಂಟ್ ಆಫೀಸ್
ವಾಸಸ್ಥಳ ಃ ನಂದಿನಿ ಲೇ ಔಟ್, ಬೆಂಗಳೂರು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಹೌದು

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ತಪ್ಪು ಮಾಡಿಲ್ಲ ವಿಚಾರಣೆಯಾಗಲಿ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ 20.06.2019 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**3 ನೇ ಹೆಚ್ಚುವರಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.**
**ಸಿ.ಸಿ.543/2019**

ಆರೋಪಿ ಸಂಖ್ಯೆ ಃ2
ಆಪಾದಿತರ ಹೆಸರು ಃ ಸುರೇಖಾ
ತಂದೆಯ ಹೆಸರು ಃ ಕೋಂ ರಾಜಾನಾಯ್ಕ
ವಯಸ್ಸು ಃ 56 ವರ್ಷ
ಉದ್ಯೋಗ ಃ ಗೃಹಿಣಿ
ವಾಸಸ್ಥಳ ಃ ನಂದಿನಿ ಲೇ ಔಟ್, ಬೆಂಗಳೂರು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಹೌದು

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ತಪ್ಪು ಮಾಡಿಲ್ಲ ವಿಚಾರಣೆಯಾಗಲಿ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ 20.06.2019 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**3 ನೇ ಹೆಚ್ಚುವರಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.**
**ಸಿ.ಸಿ.543/2019**

ಆರೋಪಿ ಸಂಖ್ಯೆ ಃ3
ಆಪಾದಿತರ ಹೆಸರು ಃ ರಾಜಾನಾಯ್ಕ
ತಂದೆಯ ಹೆಸರು ಃ ಲಚ್ಚಾನಾಯ್ಕ
ವಯಸ್ಸು ಃ 60 ವರ್ಷ
ಉದ್ಯೋಗ ಃ ನಿವೃತ್ತ ನೌಕರ
ವಾಸಸ್ಥಳ ಃ ನಂದಿನಿ ಲೇ ಔಟ್, ಬೆಂಗಳೂರು.

ದಂಡ ಪ್ರಕ್ರಿಯಾ ಸಂಹಿತೆ ಕಲಂ **251** ಅಡಿ ಪ್ರಕಾರ ಆರೋಪಿಯ ಹೇಳಿಕೆಃ

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ ಹೌದು

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉಃ ತಪ್ಪು ಮಾಡಿಲ್ಲ ವಿಚಾರಣೆಯಾಗಲಿ.

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕ 20.06.2019 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.